# ಪ್ರೇಮಾವತಾರ ಶ್ರೀರಾಮಕೃಷ್ಣ


❑ ಪಿ. ಪುರುಷೋತ್ತಮ ಕಾರಂತ

**ಆಧುನಿಕ ಯುಗದಲ್ಲಿ ಜಗತ್ತನ್ನೇ ತಬ್ಬಿಹಿಡಿಯುವ ವಿಶ್ವವ್ಯಾಪಕ ಪ್ರೇಮ ಅಗಾಧ ಪ್ರಮಾಣದಲ್ಲಿ ಭಗವಾನ್ ಶ್ರೀರಾಮಕೃಷ್ಣರಲ್ಲಿ ವ್ಯಕ್ತವಾಗಿ ಅವರು ಎಲ್ಲರಿಗೂ ಆಪ್ತರಾದರು. ಈ ದಿವ್ಯಪ್ರೇಮದ ರೂಪರೇಷೆಗಳ ಒಂದು ಕಿರು ಪರಿಚಯವನ್ನು ಮಾಡಿಕೊಟ್ಟಿರುವ ಶ್ರೀಯುತ ಪಿ. ಪುರುಷೋತ್ತಮ ಕಾರಂತರು ಪ್ರತಿಭಾವಂತ ಕಲೆಗಾರರೂ ಹಾಗೂ ಮಂಗಳೂರು ರಾಮಕೃಷ್ಣ ಮಠದ ಭಕ್ತರೂ ಆಗಿದ್ದಾರೆ.**

ನರೇಂದ್ರನ ಕುರಿತು ಮಾತನಾಡುವಾಗಲೇ ಅವನ ಮೇಲಿನ ಪ್ರೇಮದಿಂದ ಭಾವಪರವಶರಾಗಿ ಮಾತು ಅಡಗುತ್ತಿತ್ತು, ಶ್ರೀರಾಮಕೃಷ್ಣರಿಗೆ. ಅಂಥವರು ಒಮ್ಮೆ ಪರೀಕ್ಷೆಗಾಗಿ ನರೇಂದ್ರನೊಡನೆ ಮಾತನಾಡುವುದಿರಲಿ ಅವನತ್ತ ನೋಡುವುದನ್ನೇ ಬಿಟ್ಟುಬಿಟ್ಟರಂತೆ. ಆದರೂ ನರೇಂದ್ರನು ಮಾತ್ರ ಎಂದಿನಂತೆಯೇ ದಕ್ಷಿಣೇಶ್ವರಕ್ಕೆ ಬಂದು ಶ್ರೀರಾಮಕೃಷ್ಣರಿಗೆ ನಮಸ್ಕರಿಸಿ ಅವರ ಸಮ್ಮುಖದಲ್ಲಿ ಸ್ವಲ್ಪ ಹೊತ್ತು ಕುಳಿತಿದ್ದು ಮರಳುತ್ತಿದ್ದನಂತೆ. ನಾಲ್ಕಾರು ವಾರಗಳೇ ಹೀಗೆ ಕಳೆದ ಅನಂತರ ಶ್ರೀರಾಮಕೃಷ್ಣರು, "ನೋಡು, ನಾನು ನಿನ್ನನ್ನು ನೋಡದೇ ಮಾತನಾಡದೇ ಇದ್ದರೂ ನೀನೇಕೆ ಇಲ್ಲಿಗೆ ಬರುತ್ತೀಯೆ?" ಎಂದು ಪ್ರಶ್ನಿಸಿದರು. ಆಗ ನರೇಂದ್ರನು, "ಮಹಾಶಯರೇ, ನಾನು ನಿಮ್ಮ ಮಾತಿಗಾಗಿಯೇ ಬರುತ್ತಿಲ್ಲ, ನಾನು ನಿಮ್ಮ ಪ್ರೀತಿಗಾಗಿ ಬರುತ್ತಿದ್ದೇನೆ ಅಷ್ಟೇ!" ಎಂದು ಸ್ಪಷ್ಟವಾಗಿ ಉತ್ತರಿಸಿದನು.

ಸಾಮಾನ್ಯವಾದ ಯಾವ ತರಹದ ಪ್ರಭಾವ, ಬಲವಂತಕ್ಕೂ ಕಟ್ಟುಬೀಳದ ವೀರವೇದಾಂತಿ ನರೇಂದ್ರನೇ ಶ್ರೀರಾಮಕೃಷ್ಣರ ಅದೆಂತಹ ಪ್ರೇಮಪಾಶದಿಂದ ಬಂಧಿತನಾಗಿ ಮಂತ್ರಮುಗ್ಧನಂತೆ ವರ್ತಿಸುತ್ತಿದ್ದ! ಅವರ ಆ ಅಹೇತುಕ ನಿರ್ಮಲ ಪ್ರೇಮದ ಅಗಾಧತೆಯನ್ನು ನರೇಂದ್ರನೇ ಇನ್ನೊಮ್ಮೆ ಹೀಗೆ ಕೊಂಡಾಡಿದ : "... ಶ್ರೀರಾಮಕೃಷ್ಣರು ಪ್ರೀತಿಸಿದಂತೆ ಮತ್ತಾರು ಪ್ರೀತಿಸಬಲ್ಲರು! ತಂದೆ ತಾಯಿ ಸೋದರ ಸೋದರಿಯರಾರಿಂದಲೂ ನಾವು ಅಂತಹ ಪ್ರೇಮವನ್ನು ನಿರೀಕ್ಷಿಸಲೂ ಸಾಧ್ಯವಿಲ್ಲ. ಅವರ ಪ್ರೇಮ ಅಂತಹ ಅಗಾಧ, ಅಹೇತುಕವಾದದ್ದು..." ಇದೇ ಶ್ರೀರಾಮಕೃಷ್ಣರ ಅಹೇತುಕ ದಿವ್ಯಪ್ರೇಮದ ಬಗೆ. ಇದೇ ನಿಜವಾಗಿ ವಿಶ್ವಾತ್ಮ ಭಾವದ, ಅಹಂಶೂನ್ಯವಾದ ಪ್ರೇಮದ ವಿಲಾಸವೈಭವ. ಪವಾಡಗಳೇನೂ ಇರದೆ ತಾಯಿ ಮಗುವಿಗೆ ಹಂಬಲಿಸುವಂತೆ ಶಿಷ್ಯರಿಗಾಗಿ ಅತ್ತವರಿದ್ದರೆ, ಅದು ಶ್ರೀರಾಮಕೃಷ್ಣರು ಮಾತ್ರ! ಈ ಪ್ರೇಮವೆ ಅಧ್ಯಾತ್ಮ ಜೀವನದ ಮಹೋನ್ನತ ಸ್ಥಿತಿ!

ನಮ್ಮ ಮುಖದ ಮೇಲೆ ಕಣ್ಣುಗಳು ಯೋಗ್ಯ ಸ್ಥಾನದಲ್ಲಿದ್ದರೂ, ಇಡೀ ಜಗತ್ತನ್ನೇ ನೋಡಲು ಸಾಧ್ಯವಿದ್ದರೂ ಆಶ್ಚರ್ಯವೆಂದರೆ ನಮ್ಮ ಅಂಗ್ಗೆ ಅಗಲದ ಮುಖವನ್ನೇ ಅವು ನೋಡಲಾರವು. ಆದರೆ ಈ ಸಮಸ್ಯೆಗೆ ಒಂದು ಪರಿಹಾರವಿದೆ, ದರ್ಪಣದ ಸಹಾಯದಿಂದ ನಮ್ಮ ಮುಖವನ್ನು ನೋಡಬಹುದು. ಆದರೆ ನಮಗೆ ಇನ್ನೊಂದು ವಿಶೇಷ ತರಹದ ಕುರುಡುತನವಿದೆ, ಅದಂತೂ ಸಾಮಾನ್ಯ ಯಾವ ತರಹದ ಉಪಾಯದಿಂದಲೂ ಪರಿಹರಿಸಲಾಗದ್ದು! ಇಡೀ ವಿಶ್ವವ್ಯಾಪ್ತವಾದ, ಅಣುಕಣಗಳಲ್ಲೂ ಲಾಸ್ಯವಾಡುವ ಭಗವತ್ ಪ್ರೇಮವನ್ನೂ ಸತ್ಯಸೌಂದರ್ಯವನ್ನೂ ನಾವು ಕಾಣಲಾರೆವು! ನಮ್ಮ ಒಳಹೊರಗೆ ನಿರಂತರ ಈ ಲೀಲೆ ನಡೆಯುತ್ತಿದ್ದರೂ ನಾವು ಅದಕ್ಕೆಲ್ಲ ಕುರುಡರು! ಇದೊಂದು ಬಗೆಹರಿಯಲಾರದ ಸಮಸ್ಯೆ. 'ನಾನು' ಅಸ್ತಿತ್ವದಲ್ಲಿ ಇರುವತನಕ ಈ ದೈವಿಕ ಗುಣಗಳನ್ನು ನಾವು ನೋಡಲಾರೆವು! ಇದಕ್ಕೆ ಯಾವ ಮಾಧ್ಯಮವಾಗಲಿ ಚಿಕಿತ್ಸೆಯಾಗಲಿ ಇಲ್ಲ! ವಿಶ್ವದ ಈ ಎರಡು ಸ್ಥಿತಿಗಳು ಪರಸ್ಪರ ನೋಡಲಾರದ ಒಂದು ವಿಚಿತ್ರ ಸ್ಥಿತಿ!



ಇಲ್ಲಿಯೇ ಇದ್ದೂ ಈ ರೀತಿಯಲ್ಲಿ ಅಸಹಾಯಕನಾಗಿ ಕುರುಡನಾದ ಈ 'ನಾನು' ಯಾರು? ಯಾಕೀ ಕುರುಡುತನ ಎಂಬುದನ್ನು ತಿಳಿದುಕೊಳ್ಳುವುದೇ ಇದಕ್ಕಿರುವ ಒಂದೇ ಒಂದು ಪರಿಹಾರವಾಗಿದೆ! ಸದಾಕಾಲ ಇಲ್ಲಿ ಲೀಲೆಯನ್ನು ನಡೆಸುತ್ತಿರುವ ಈ ದೈವಿಕ ಭಾವಗಳಿಗೆ ಕುರುಡನಾದ 'ನಾನು' ಗತಕಾಲದ ಶತ ಶತಮಾನಗಳ ಹಾಗೂ ಮುಂದೆಷ್ಟೋ ಭವಿಷ್ಯತ್ತಿನ ಊಹಾಪೋಹಗಳ ಅತಿ ಸಂಕೀರ್ಣವಾದ ಒಂದು ಮೂಟೆಯಾಗಿದೆ. ಇಂತಹ ಪೂರ್ವ-ಪರ ವ್ಯಾಪ್ತ ಅಸಂಖ್ಯಾತ ಭಾವನೆಗಳ ಜಟಿಲವಾದ ಕಂತೆ ಅದು ! ಈ 'ನಾನು'ವಿನೊಳಗಿರುವ ಈ ಸಂಕೀರ್ಣತೆಯನ್ನು ಒಮ್ಮೆಯಾದರೂ ನಾವು ಪ್ರಾಮಾಣಿಕವಾಗಿ ಕಂಡುಕೊಂಡಿದ್ದೇವೆಯೇ? ಹಾಗಿದ್ದರೆ ನಿಜವಾಗಿ ನಮ್ಮ ದೃಷ್ಟಿಯೇ ಬದಲಾಗು

ತ್ತಿತ್ತು. ಅದೇ ವಿಶ್ವಾತ್ಮಭಾವದ ಅಹೇತುಕ ಪ್ರೇಮದ ದೃಷ್ಟಿಯಾಗುತ್ತಿತ್ತು. ನಿಜವೆಂದರೆ, ಸಾಮಾನ್ಯರಾರೂ ಪ್ರಾಮಾಣಿಕವಾಗಿ ಈ ವೀಕ್ಷಣೆಗೆ ಧೈರ್ಯ ಮಾಡುವುದೇ ಇಲ್ಲ. ಅವರಲ್ಲಿ ಈ ಬಗ್ಗೆ ಪ್ರಾಮಾಣಿಕವಾದ ಶುದ್ಧ ಹಂಬಲವೇ ಇರುವುದಿಲ್ಲ. ನಮ್ಮ ಜೀವನದಲ್ಲಿ ಒಂದು ಬಾರಿಯಾದರೂ ಈ 'ನಾನು' ಯಾರು, ಇವನ ವ್ಯಾಪ್ತಿ ಮತ್ತು ಶಕ್ತಿಯ ಇತಿಮಿತಿಗಳೇನು ಎಂಬುದನ್ನು ಮನಗಂಡರೆ ಸಾಕು, ಮುಂದೆ ಜೀವನದ ಬಗೆಯೇ ಬೇರೆ ಆಗುವುದು!

ಆದರೆ ನಮ್ಮೊಳಗಿನ ಈ 'ನಾನು'ವಿನ ಪೊಳ್ಳುತನವನ್ನು ಬಯಲು ಮಾಡಿಕೊಳ್ಳುವಲ್ಲಿ ನಾವೇ ಹೆದರಿ ಹಿಂಜರಿಯುತ್ತೇವೆ. ನಮ್ಮ ಈ ಬಗೆಯ ಬಿಂಬದ ಇದಿರು ನಿಲ್ಲುವುದಕ್ಕೆ ನಾವೇ ಧೈರ್ಯಗೆಡುತ್ತೇವೆ. ಈ ಟೊಳ್ಳುತನದ ಇದಿರು ಆಗಲೇ ನಮ್ಮ ಬಹುಮುಖವಾದ 'ಭಯ' ಒಂದು 'ಸಂಧಾನ' ಮಾಡಿಕೊಳ್ಳುತ್ತದೆ. ಇಂತಹ ಕಿಸರುಕಣ್ಣಿನಿಂದ ನಾವು ಸತ್ಯದ ಇದಿರು ನಿಂತೂ ಕರಗದೆ ತನ್ಮಯರಾಗದೆ ಹೊರಗಿನಿಂದಲೇ ಅದಕ್ಕೊಂದು ಕೃತಕ ಹೊಸ ತಿರುವನ್ನು ಕಲ್ಪಿಸಿಕೊಳ್ಳುತ್ತೇವೆ. ಇದರಿಂದಾಗಿಯೇ ಸಾಧಾರಣವಾಗಿ ಸಾಧಕರೆಲ್ಲರ ಈ ವಿಷವೃತ್ತ ಅವರದೇ ದಯೆಯಿಂದ, ಇಚ್ಛೆಯಿಂದ, (ಭಯ-ಉದಾಸೀನತೆ) ಪೋಷಿಸಲ್ಪಟ್ಟು ನಿರಂತರವಾಗುತ್ತದೆ. ಇದರಿಂದಾಗಿ ನಾವು ಸತ್ಯದರ್ಶನದಿಂದ ವಂಚಿತರಾಗುತ್ತೇವೆ. ಒಂಟೆಗೆ ಮುಳ್ಳನ್ನು ಅಗಿಯುವುದೇ ಹಂಬಲ! ನಾವು ಕುಳಿತ ಈ ತುಂಡು ಜಮಖಾನವು ಒಂದು ವಿಶಾಲವಾದ ಜಮಖಾನದ ಕೇವಲ ಒಂದು ಭಾಗವೆಂದು ತಿಳಿದೂ, ಈ ತುಣುಕು ಜಮಖಾನದಿಂದ ನಮ್ಮ ದೃಷ್ಟಿಯನ್ನು ಕೀಳಲಾರೆವು. ತುಣುಕನ್ನೇ ಸ್ವಾಧೀನ ಮಾಡಿಕೊಳ್ಳುವ ಎಳೆದಾಟ ಹೊಡೆದಾಟದಲ್ಲಿ ನಾವು ತನ್ಮಯರಾಗುತ್ತೇವೆ. ಇದಕ್ಕೆ ಕಾರಣ ಈ ಅಲ್ಪ 'ನಾನು'ವಿನ ಅಸಂಖ್ಯಾತ ಆಯಾಮಗಳ ಮೇಲಿನ ನಮ್ಮ ಮೋಹ! ಶ್ರೀರಾಮಕೃಷ್ಣರೇ ಉದಾಹರಿಸಿದಂತೆ ಬಲೆಯೊಳಗೆ ಸಿಕ್ಕಿಬಿದ್ದ ಮೀನುಗಳಲ್ಲಿ ಕೆಲವು ಒಳಗೊಳಗೇ ನುಣುಚಿಕೊಂಡು "ನಾವೀಗ ಸುರಕ್ಷಿತ" ಎಂದುಕೊಳ್ಳುತ್ತವೆ. ಹಾಗೆಯೇ ನಾವು ನಮ್ಮ ಅಲ್ಪ 'ಅಹಂ'ನಲ್ಲಿ ಹುದುಗಿಕೊಳ್ಳುತ್ತೇವೆ.

ಇಂತಹ ಈ ಅಲ್ಪ 'ನಾನು' ವಿಶ್ವವ್ಯಾಪಿಯಾದ ಅಣುಕಣಗಳಲ್ಲೂ ಲಾಸ್ಯವಾಡುವ ದೈವೀಗುಣಗಳಿಗೆ ಕುರುಡಲ್ಲದೆ ಮತ್ತೇನು! ಶ್ರೀರಾಮಕೃಷ್ಣರು ಬಾಲ್ಯದಲ್ಲಿ ಒಂದು ದಿನ ತಮ್ಮ ಹಳ್ಳಿಯ ಗದ್ದೆಯ ನಡುವೆ ಹುರಿಗಾಳು ಮೆಲ್ಲುತ್ತ ನಡೆಯುತ್ತಿದ್ದರು. ಸುತ್ತಲೂ ಹಚ್ಚಹಸುರಾದ ಗದ್ದೆ, ಬಾನಿನಲ್ಲಿ ದಟ್ಟ ನೀಲ ಮೇಘಗಳ ರಾಶಿ. ಅದರ ಮುಂದೆ ಹಾರುವ ಬೆಳ್ಳನೆ ಬಲಾಕ ಪಕ್ಷಿಗಳ ಮಾಲೆ! ಈ ಸುಂದರ ದೃಶ್ಯವನ್ನು ಕಂಡೊಡನೆ, ಅವರ ಮುಗ್ಧತೆಯ 'ನಾನು' ಒಮ್ಮೆಯೇ ಕೊಚ್ಚಿಕೊಂಡು ಹೋಯಿತು! ಅಲ್ಲಿ 'ಅಯ್ಯೋ' 'ನಾನು' 'ಈ ಸೌಂದರ್ಯ-ಸೃಷ್ಟಿ' ಎನ್ನುವ, ಹಲವು ಬಗೆಯಲ್ಲಿ ವರ್ಣಿಸುವ ಕವಿ, ಕಲೆಗಾರ ಅಥವಾ ವಿಚಾರಿ ಯಾರೂ ಇರದ, ಉಪಾಧಿರಹಿತ, ದೈವಿಕವಾದ ಸತ್ಯ ಪ್ರೇಮ ಸೌಂದರ್ಯಗಳನ್ನು ಅನುಭವಿಸಿದರು—ಅಥವಾ ಅನುಭವದಲ್ಲಿ ಮುಳುಗಿಹೋದರು. ಸೂಕ್ಷ್ಮವಾಗಿಯಾದರೂ ಹೊರಗೆ ನಿಂತು ವರ್ಣಿಸುವ, ಭಾಷಾಂತರಿಸುವ, ಅನುಭವಿಸುವ 'ನಾನು' ಇದ್ದಿದ್ದರೆ ಆ ಅತೀತತೆ ಹೇಗೆ ಲಭಿಸೀತು! ಅದು ಪೂರ್ವಯೋಜಿತ ಅಥವಾ ಕಲ್ಪಿತ ದರ್ಶನಗಳಿಗಿಂತ ವಿಭಿನ್ನವಾಗಿತ್ತು. ಅಂದರೆ ಆ ಅನುಭವದಲ್ಲೆ ಶ್ರೀರಾಮಕೃಷ್ಣರ 'ಅಹಂ' ಲೀನವಾಗಿರಬೇಕು.

ಇದಕ್ಕೆ ಪೂರ್ವಸಿದ್ಧತೆ ಎಂಬಂತೆ ಶ್ರೀರಾಮಕೃಷ್ಣರ ಜೀವನದಲ್ಲಿ ಎಳವೆಯಿಂದಲೇ ಅಸಾಮಾನ್ಯ ಮುಗ್ಧತೆ ಮತ್ತು ಶುದ್ಧತೆಯನ್ನು ನಾವು ಕಾಣಬಹುದು. ಗೋಪಿಯರನ್ನೂ ಗೋವಳರನ್ನೂ ಗೋವುಗಳನ್ನೂ ಯಮುನೆಯನ್ನೂ ವೃಂದಾವನವನ್ನೂ ಎಲ್ಲವನ್ನೂ ಒಂದೇ ಸಮನಾಗಿ ಪ್ರೀತಿಸುತ್ತಿದ್ದ ಪ್ರೇಮಮೂರ್ತಿ ಶ್ರೀಕೃಷ್ಣನಂತೆ ಶ್ರೀರಾಮಕೃಷ್ಣರಲ್ಲಿಯೂ ಪ್ರೇಮಮಯ ಭಾವ ಆಗಲೇ ಅರಳಿತ್ತು. ಹುಟ್ಟಿದ ನೆಲದ ಆಚಾರ ವಿಚಾರ ಸಂಸ್ಕೃತಿಗಳನ್ನೂ ಗಂಡಸರು ಹೆಂಗಸರು ಎಳೆಯರು ಹರೆಯದವರನ್ನೂ ಮನಸಾರೆ ಮೆಚ್ಚಿದ್ದರು. ನಿಷ್ಕಳಂಕ ಹೃದಯದಿಂದ ಸಾತ್ವಿಕ ಪ್ರೇಮದಿಂದ ಜಗತ್ತನ್ನೇ ಪ್ರೀತಿಸಿದರು ಮತ್ತು ಎಲ್ಲರಿಗೂ ಪ್ರಿಯರಾದರು! ಪ್ರೇಮಮಯವಾದದ್ದು ಅಸತ್ಯವಾಗಿರದು ಎಂಬುದರ ಅಗಾಧತೆಯನ್ನೂ ಸತ್ಯವನ್ನೂ ಹೃದಯದಲ್ಲಿ ಅನುಭವಿಸತೊಡಗಿದ ಶ್ರೀರಾಮಕೃಷ್ಣರು ಪ್ರೇಮಮಯಿ ಜಗನ್ಮಾತೆಯನ್ನು ಕಲ್ಲಿನಲ್ಲಿ ಸತ್ಯವಾಗಿ ಕಾಣಲು ಪಣತೊಟ್ಟರು. ಈ ಸಾಧನೆಯ ಫಲವಾಗಿ ಮುಂದೆ ಜಗನ್ಮಾತೆಯ ಪ್ರೇಮವಾತ್ಸಲ್ಯಗಳ ಅಮೃತ ಮಹಾಪೂರ ಅವರ ಹೃದಯವನ್ನು ಆವರಿಸತೊಡಗಿತು. ತಮ್ಮನ್ನು ಭಗವಂತನ ದಿವ್ಯಪ್ರೇಮದ ಕಾಲುವೆಯಾಗಿ ಪರಿವರ್ತಿಸಿಕೊಂಡರು ಶ್ರೀರಾಮಕೃಷ್ಣರು. ಹೀಗೆ ಪ್ರೇಮದ ಮೂಲಕ ಪ್ರೇಮವನ್ನು ಸೇರಿ, ಪ್ರೇಮಮಯವೇ ಆದರು!

ಶ್ರೀರಾಮಕೃಷ್ಣರಲ್ಲಿ ಆ ದಿವ್ಯಪ್ರೇಮ ಅವತರಿಸಿ ಅವರನ್ನು ಸಂಪೂರ್ಣ ಅಹಂಕಾರಶೂನ್ಯರನ್ನಾಗಿ ಮಾಡಿತ್ತು. ಅವರ ಆಚಾರ ವಿಚಾರ ಭಾವ ಬೋಧೆ ಮುಖಮಂಡಲ ಎಲ್ಲವೂ ಮುಗ್ಧ ಕರುಣಾಮಯ ಮಾತೆಯಂತೆ ಪ್ರೇಮಭರಿತವಾದವು. ವಿವಿಧ ಭಾವಗಳ, ಪಂಥಗಳ ಭಕ್ತರೆಲ್ಲರಿಗೂ ಅವರು ಭರವಸೆಯ ಆಸರೆಯಾಗಿದ್ದರು. ಬಯಸಿ ಬಂದವರಿಗೆ ಅವರವರ ಬಯಕೆಯಂತೆ ತಮ್ಮ ಹೃದಯದೊಳಗೆ ಆಶ್ರಯ ನೀಡಿ, ಆಶ್ರಯದಾತನೆಂಬ ಗರ್ವ ಇರದೆ ಶಾಂತಿಯನ್ನು ಕರುಣಿಸುವ ಅನಂತ ಭಾವಗಳ ಶಾಂತ ಸಾಗರವಾದರು. ಅವರು ಸರ್ವಜ್ಞ, ಆದರೂ ಮಗುವಿನಂತೆ ಮುಗ್ಧ.

ಹರುಕಲು ಗಡ್ಡದ, ಮೈಮೇಲೆ ಒಂದೆರಡು ಮಿತವಾದ ಉಡುಗೆಗಳನ್ನೂ ಓರಣವಾಗಿ ಧರಿಸಲಾರದ, ಸದಾ ಕಾಲವೂ ಕೇವಲ ಭಗವಂತನ ಚಿಂತನೆಯಲ್ಲಿ ಮತ್ತರಾಗಿ ಜಗತ್ತನ್ನೇ ಮರೆತಿರುವ, ಆಧುನಿಕ ವಿದ್ಯೆ ಅಥವಾ ಜೀವನದ ಮೆರುಗೇ ಇರದ, ಲೌಕಿಕ ಪವಾಡಗಳನ್ನು ತುಚ್ಛವಾಗಿ ಕಂಡ, ಕಾಳಿಗುಡಿಯ ಒಬ್ಬ ಸಾಧಾರಣ ಪೂಜಾರಿಯಾಗಿದ್ದ ಶ್ರೀರಾಮಕೃಷ್ಣರ ಪ್ರೇಮಪವಾಡ ಅಸಾಧಾರಣವಾದುದು. ಒಂದು ಶತಮಾನದ ಹಿಂದೆ ಆಂಗ್ಲೇಯರ ಹೊಚ್ಚ

ಹೊಸ ಪ್ರಭಾವಕ್ಕೊಳಗಾದ ಆ ಕೊಲ್ಕತದ ನಾಗರಿಕ ಸಮಾಜದಲ್ಲಿ, ಇಂಗ್ಲಿಷ್ ಕಲಿತು ಪ್ರತಿಭಾನ್ವಿತರೂ ಕುಲೀನ ಮನೆತನದವರೂ ರೂಪ, ಯೌವನ, ಆರೋಗ್ಯದಿಂದ ಸಂಪನ್ನರಾಗಿ ಮೆರೆಯುವವರೂ ಹದಿಹರೆಯದ ಚೈತನ್ಯ ಚಿಲುಮೆಗಳೂ ಆದ ಹಲವಾರು ಯುವಕರು ತಂದೆತಾಯಿಯರನ್ನು ಬಿಟ್ಟು, ನಗರ-ಹಳ್ಳಿಗಳಿಂದ ಬಂದು, ಇವರ ಸೇವೆಯಲ್ಲಿ ನಿರತರಾದದ್ದು ಜಗತ್ತಿನ ಇತಿಹಾಸದಲ್ಲಿ ಎಣೆಯಿಲ್ಲದ ಪ್ರೇಮಪವಾಡವೇ ಸರಿ!

ಹೀಗೆ ಸಂಸಾರದಿಂದ ಹೊರಗೆ ಬಂದ ಯುವಕರು ಈ ಅರ್ಚಕ ಶ್ರೀರಾಮಕೃಷ್ಣರಲ್ಲಿ, ಅವರ ಸಹವಾಸದಲ್ಲಿ ಕಂಡುದಾದರೂ ಏನಿರಬಹುದು? ನಿಷ್ಕಲಂಕ, ಅಹೇತುಕ ಪ್ರೇಮಾಮೃತ ಮಾತ್ರ! ಶ್ರೀರಾಮಕೃಷ್ಣರು ತಮ್ಮಲ್ಲಿಗೆ ಬಂದವರಿಗೆ ಬೇರಾರೂ ಕೊಡಲಾರದಷ್ಟು, ಕೊಂಡವರು ಋಣಿಯಾಗುವಷ್ಟು, ಹೃದಯ ಸಂಪತ್ತನ್ನು ಕೊಟ್ಟರು. ಯೋಗಿಗಳು, ಜ್ಞಾನಿಗಳು, ಭಕ್ತರು, ಗೃಹಸ್ಥರು, ಬಾಲಕರು, ವೃದ್ಧರು, ಗಂಡಸರು, ಹೆಂಗಸರೆನ್ನದೆ ಜೀವನದ ವಿವಿಧ ಪಥಗಳ ಪಂಥಗಳ ಪ್ರತಿಯೊಬ್ಬನೂ ತನ್ನನ್ನೇ ಶ್ರೀರಾಮಕೃಷ್ಣರು ಪೂರ್ಣವಾಗಿ ಪ್ರೀತಿಸುತ್ತಿರುವರು ಎಂದು ಭಾವಿಸಿ, ಮೊದಲ ಭೇಟಿಯಿಂದಲೆ ಅವರೆಡೆಗೆ ಆಕರ್ಷಿತರಾಗುತ್ತಿದ್ದುದೇ ಈ ಪ್ರೇಮದ ವೈಶಿಷ್ಟ್ಯ! ಇಡೀ ವಿಶ್ವವನ್ನೇ ಭಗವಂತನ ಲೀಲೆ, ಸಾಕಾರಸ್ವರೂಪ ಎಂದು ಕಂಡುಕೊಂಡ ಇವರು, **"ಭಗವಂತನನ್ನು ಪ್ರೀತಿಸಬೇಕಾದರೆ ಅವನ ಈ ಸಂಸಾರವನ್ನು ಪ್ರೀತಿಸಿರಿ"** ಎನ್ನುವ ತಮ್ಮ ಸಂದೇಶಕ್ಕೆ ಆದರ್ಶವಾಗಿದ್ದರು.

ತರ್ಕಸಿದ್ಧ, ವೈಜ್ಞಾನಿಕ ದೃಷ್ಟಿಯ, ಬಹುಮುಖ ಪ್ರತಿಭೆಯ, ಪರೀಕ್ಷೆಯಿಂದಲೇ ಸತ್ಯವನ್ನು ಸ್ವೀಕರಿಸುವ, ಸುಲಭನಲ್ಲದ ನರೇಂದ್ರನನ್ನು ತಮ್ಮ ಅದ್ಭುತ ಪ್ರೇಮಧಾರೆಯಿಂದಲೇ ಒಲಿಸಿಕೊಂಡರು! ಮುಂದೆ ಜಗತ್ತಿಗೇ ವಿವೇಕದ ಪ್ರವಾಹವನ್ನು ಕರುಣಿಸಿದ ಶಕ್ತಿಯೇ ಇವರ ಈ ಪ್ರೇಮದ ಅಮೂಲ್ಯ ಕೊಡುಗೆ! ಆ ಕಾಲದಲ್ಲಿ ವಿದ್ಯಾವಂತರೆಲ್ಲರೂ ತಲೆಬಾಗುತ್ತಿದ್ದ, ಪೂರ್ವ ಪಶ್ಚಿಮದ ಸಂಸ್ಕೃತಿಯ ಸೇತುವೆಯಂತಿದ್ದ ಬ್ರಾಹ್ಮಸಮಾಜದ ತತ್ತ್ವಜ್ಞಾನಿ ಕೇಶವಚಂದ್ರಸೇನ ಇವರ ಸರ್ವಧರ್ಮಸಹಿಷ್ಣುತೆ ಹಾಗೂ ಎಲ್ಲ ಭಾವಗಳಲ್ಲೂ ಭಗವಂತನನ್ನು ಒಪ್ಪುವ ವಿಶ್ವಪ್ರೇಮದ ಎದುರು ಹಸುಳೆಯಂತಾದನು. ಜಗತ್ತಿನಲ್ಲಿ ಎಲ್ಲೋ ಕೆಲವರು ಮಾತ್ರ ಇಂತಹ ಪ್ರೇಮವನ್ನು ಹೊಂದುವರು. ಆದ್ದರಿಂದಲೇ ಜಗತ್ತಿನ ವಿವಿಧ ಜೀವನಪಥಗಳ, ಪಂಥಗಳ ಜನರನ್ನು ಈ ದಿವ್ಯ ಪ್ರೇಮದ ಶಕ್ತಿಯಿಂದ ಒಂದೇ ತೆರನಾಗಿ ಆಕರ್ಷಿಸಲು ಸಾಧ್ಯವಾಯಿತು.

ಲಾಟುವಿನಂತಹ ಅನಕ್ಷರಸ್ಥ ಗ್ರಾಮೀಣನಿಗೂ, ಮಹಾಜ್ಞಾನಿ ನರೇಂದ್ರನಿಗೆ ಹೇಗೋ ಹಾಗೆ ಪ್ರೀತಿಯಿಂದ ಭಗವಂತನ ಅನುಗ್ರಹವನ್ನು ಕರುಣಿಸಲು ಶ್ರೀರಾಮಕೃಷ್ಣರಿಗೆ ಸಾಧ್ಯವಾಯಿತು. ಶ್ರೀರಾಮಕೃಷ್ಣರ ಜೀವನದುದ್ದಕ್ಕೂ ಇಂತಹ ಘಟನೆಗಳು ಹರಡಿಕೊಂಡಿವೆ. "ನರೇಂದ್ರನ ಬಡತನವನ್ನು ಹೋಗಲಾಡಿಸಲು ಹತ್ತಾರು ಮನೆಗಳಲ್ಲಿ ಭಿಕ್ಷೆ ಬೇಡಿಯೇನು..." ಎನ್ನುವ ಆ ಹೃದಯ, ಲಾಟುವಿನ ಪಾದರಕ್ಷೆ ಕಳೆದುಹೋದಾಗ ರಾತ್ರಿ ಎದ್ದು ಹಿತ್ತಿಲಲ್ಲಿ ಹುಡುಕುವಷ್ಟು ಸಮಾನ ಪ್ರೇಮಮಯವಾಗಿತ್ತು. ಮುಂದೆ ಅದ್ಭುತಾನಂದರು(ಲಾಟು) ಶ್ರೀರಾಮಕೃಷ್ಣರ ಅಗಾಧ ಪ್ರೇಮದ ಮಹಿಮೆಯನ್ನು ಕುರಿತು ಹೀಗೆ ಹೇಳುತ್ತಿದ್ದರು: "....ನನ್ನ ಮನಸ್ಸು ಧ್ಯಾನದಲ್ಲಿ ತೊಡಗಲು ಅಶಕ್ತವಾದರೆ ಯಾವಾಗಲೂ ನಾನು ಆ ಮಹಾಮಹಿಮ ಅವತಾರ ಪುರುಷರು ನನ್ನ ಮೇಲೆ ತೋರಿದ ಪ್ರೇಮದ ಆ ಘಟನೆಯನ್ನು ನೆನೆದ ಕೂಡಲೆ ನಾನು ಅಂತರ್ಮುಖಿಯಾಗುತ್ತೇನೆ." ಸ್ವೇಚ್ಛಾಚಾರಿ ಎನಿಸಿಕೊಂಡ ಗಿರೀಶ್ ಘೋಷ್ ಶ್ರೀರಾಮಕೃಷ್ಣರಲ್ಲಿ ಶರಣಾದಾಗ "....ನಾನಿರುವುದು ಮತ್ತೇಕೆ? ನಿನ್ನಂಥವನಿಗೂ ಉದ್ಧಾರದ ದಾರಿಯಿದೆ ಎಂದು ತೋರಿಸುವುದಕ್ಕೆ" ಎಂದು ಹೇಳಿ, ಪ್ರೇಮದ ಉದ್ಧಾರಕ ಶಕ್ತಿಯ ಅತ್ಯುಚ್ಚ ಮಟ್ಟವನ್ನು ಪ್ರಕಟಿಸಿದರು. ಗಿರೀಶನೇ ಮುಂದೆ, ಶ್ರೀರಾಮಕೃಷ್ಣರ ಶಿಷ್ಯವೃಂದದ ಮತ್ತು ಸ್ವಾಮಿ ವಿವೇಕಾನಂದರ ಒಡನಾಟದ ಸೌಭಾಗ್ಯದಲ್ಲಿರುವಾಗ— "...ನನ್ನಂತಹ ತುಚ್ಛ ಮನುಷ್ಯನನ್ನೂ ನಿಮ್ಮ ಪವಿತ್ರ ಸಹವಾಸದಲ್ಲಿರಿಸಿದ ಆ ಅವತಾರ ಪುರುಷನ ಪ್ರೇಮ ಹಾಗೂ ಕರುಣೆಯನ್ನು ನಾನು ಹೇಗೆ ವರ್ಣಿಸಲಿ!"—ಎಂದು ಗದ್ಗದ ಕಂಠದಿಂದ ಕಂಬನಿ ಸುರಿಸುತ್ತ ನುಡಿದನು.

ಭಕ್ತರೊಡನೆ ಹಾಡುವ ನಲಿಯುವ ಸರಸವಾಡುವ, ತಮ್ಮ ಗಂಟಲ ಬೇನೆಯನ್ನು ಲೆಕ್ಕಿಸದೆ ಉಪದೇಶವೀಯುವ, ತಮ್ಮ ಭಕ್ತರ ಬರವಿಗಾಗಿ ಅತ್ಯುತ್ಕರೆಯುವ ಪ್ರೇಮದ ಆದರ್ಶದ ಬಣ್ಣ ಬಣ್ಣದ ಹೂಗಳು ಅವರ ಜೀವನದ ತುಂಬ ಅರಳಿ ನಿಂತಿವೆ. ಮಡದಿ ಶಾರದಾದೇವಿಯವರನ್ನು ಜಗತ್ತಿಗೇ ಮಹಾಮಾತೆಯಂತಾಗುವ ಜವಾಬ್ದಾರಿಯನ್ನು ಹೊರಿಸಿದ ಪ್ರೇಮ, ಕರುಣೆ ಅವರ ಹೃದಯದಲ್ಲಿತ್ತು. ಶ್ರೀರಾಮಕೃಷ್ಣರ ಸರಳ ಮುಗ್ಧ ಅವತಾರಲೀಲೆಯಲ್ಲಿ ಭವರೋಗದ ದಿವ್ಯೌಷಧವಾಗಿ ಧರೆಗೆ ಇಳಿದದ್ದೇ ಈ ದಿವ್ಯಪ್ರೇಮ! ಪ್ರೇಮದ ಮೂಲಕ ಪ್ರೇಮವನ್ನು ಸೇರಿ ಪ್ರೇಮಮಯನಾಗುವುದೇ ಅವರ ಅವತಾರದ ಪರಮೋಚ್ಚ ಆದರ್ಶ-ಸಂದೇಶ!

**...ಸ್ವಾಮಿ ವಿವೇಕಾನಂದರು ನನಗೆ ಆಧ್ಯಾತ್ಮಿಕ ಶಕ್ತಿಯ ಮಹಾಜ್ವಾಲೆಯಂತೆ ಕಾಣುತ್ತಾರೆ ಮತ್ತು ಶ್ರೀರಾಮಕೃಷ್ಣರು ಪ್ರೇಮಪುಷ್ಪದಂತೆ ಕಾಣುತ್ತಾರೆ. ಇವರಿಬ್ಬರೂ ಭಗವಂತನನ್ನೂ ಶಾಶ್ವತ ಜೀವನವನ್ನೂ ಪ್ರತಿಬಿಂಬಿಸುತ್ತಾರೆ. ಸ್ವಾಮಿ ವಿವೇಕಾನಂದರು ಮಹಾಪ್ರತಿಭಾವಂತರು, ಆದರೆ ಶ್ರೀರಾಮಕೃಷ್ಣರಾದರೊ ಆ ಪ್ರತಿಭೆಯನ್ನೂ ಮೀರಿದವರು.**

**...ಆಧ್ಯಾತ್ಮಿಕ ಅನುಭವದ ಸಂಪತ್ತಿನಿಂದಲೂ ಉಪಮೆ ರೂಪಕಗಳ ಅಕ್ಷಯ ಭಂಡಾರದಿಂದಲೂ ಅನುಪಮ ವೀಕ್ಷಣಾಸಾಮರ್ಥ್ಯದಿಂದಲೂ ಉಜ್ವಲ ಮತ್ತು ಸೂಕ್ಷ್ಮ ಹಾಸ್ಯದಿಂದಲೂ ಸಹಾನುಭೂತಿಪೂರ್ಣ ಅದ್ಭುತ ಉದಾರತೆಯಿಂದಲೂ ಕೊನೆಯಿಲ್ಲದ ವಿವೇಕಧಾರೆಯಿಂದಲೂ ಶ್ರೀರಾಮಕೃಷ್ಣರು ಜನರನ್ನು ಮಂತ್ರಮುಗ್ಧಗೊಳಿಸಿದರು.**

*—ರೋಮಾ ರೋಲಾ*